ಆರೋಗ್ಯ ಕ್ಷೇತ್ರದ ಕ್ರಾಂತಿಕಾರಕ ಸುಧಾರಣೆಗೆ ಮುಂದಡಿ

# 'ತೇಜಸ್ಕೋ ಇಂದ "ಮೆಡ್‌ಇನ್ಫೋ-ಟ್ಯಾಬ್" ಇ-ಆರೋಗ್ಯ ಮತ್ತು ಐಸಿಎಂಎಸ್ ಆಪ್ ಆವಿಷ್ಕಾರ'



ಸಾರ್ವಜನಿಕ ಆರೋಗ್ಯ ಸೇವೆಗಳನ್ನು ಇನ್ನಷ್ಟು ಸುಲಭೀಕರಿಸುವ ನಿಟ್ಟಿನಲ್ಲಿ ತೇಜಸ್ಕೋ ಟೆಕ್‌ಸಾಫ್ಟ್ ಪ್ರೈ.ಲಿ., ಮಹತ್ತರ ಹೆಜ್ಜೆ ಇರಿಸಿದ್ದು, ಸಂಸ್ಥೆಯು ಸಿದ್ಧಪಡಿಸಿರುವ 'ಆಪ್' ಸರ್ಕಾರಿ ಮತ್ತು ಖಾಸಗಿ ಆರೋಗ್ಯ ವ್ಯವಸ್ಥೆಯಲ್ಲಿ ಕ್ರಾಂತಿಕಾರಕ ಸುಧಾರಣೆ ತರಲಿದೆ ಎಂದು ಸಂಸ್ಥೆಯ ಸಿಇಓ ನಂದಿತಳೆ ಎಸ್. ಪ್ರಶಾಂತ್ ಹೇಳುತ್ತಾರೆ.

ಸರ್ಕಾರಗಳು ಗ್ರಾಮೀಣ ಜನತೆಯ ಆರೋಗ್ಯ ಸುಧಾರಣೆಗಾಗಿ ಹತ್ತು ಹಲವು ಯೋಜನೆಗಳನ್ನು ಜಾರಿಗೆ ತಂದಿವೆ. ಆದರೆ, ಪ್ರತಿ ಯೋಜನೆಯೂ ಪ್ರತ್ಯೇಕ ಗಣತಿ ಆಧಾರದ ಮೇಲೆ ನಡೆಯುತ್ತಿದೆ. ಅಂದರೆ ಗ್ರಾಮೀಣ ಪ್ರದೇಶದಲ್ಲಿ ಮನೆ ಮನೆಗೆ ತೆರಳುವ ಆರೋಗ್ಯ ಕಾರ್ಯಕರ್ತರು ಮನೆಯಲ್ಲಿ ಇರುವವರ ಮಾಹಿತಿಯನ್ನು ಕಲೆ ಹಾಕಿ ಒಂದು ಬೃಹತ್ ಪುಸ್ತಕದಲ್ಲಿ ದಾಖಲಿಸಲಾಗುತ್ತಿದೆ. ಅದೇ ಮತ್ತೊಂದು ಯೋಜನೆ ಜಾರಿಯಾದ ನಂತರ ಮತ್ತೊಮ್ಮೆ ಇದೇ ಕಾರ್ಯ ಮಾಡಲಾಗುತ್ತದೆ. ಇದರಿಂದ ಸಮಯ ವ್ಯರ್ಥವಾಗುವುದಲ್ಲದೆ, ಯೋಜನೆ ಜಾರಿಗೆ ವಿಳಂಬ ಸೇರಿದಂತೆ ಜನತೆಯ ಆರೋಗ್ಯದ ಬಗೆಗಿನ ಹಿಂದಿನ ಮಾಹಿತಿ ಲಭ್ಯವಾಗದಂತಹ ಪರಿಸ್ಥಿತಿ ಇದೆ.

ಈ ವ್ಯವಸ್ಥೆಯನ್ನು ಅತ್ಯಾಧುನಿಕ ತಂತ್ರಜ್ಞಾನದೊಂದಿಗೆ ಬದಲಿಸುವ ಕಾರ್ಯಕ್ಕೆ ಮುಂದಾದ ತೇಜಸ್ಕೋ, ಈ ವ್ಯವಸ್ಥೆಯನ್ನು ಸಂಪೂರ್ಣವಾಗಿ ಪರಾಮರ್ಶಿಸಿದ ನಂತರ ಈಗ ಆಗುತ್ತಿರುವ ಸಮಸ್ಯೆ ಮತ್ತು ತೊಡಕುಗಳನ್ನು ನಿವಾರಿಸುವ ನಿಟ್ಟಿನಲ್ಲಿ ಟ್ಯಾಬ್ ನಿಯಂತ್ರಿತ 'ಇ- ಆರೋಗ್ಯ' ಎಂಬ ಆಪ್ ಸಿದ್ಧಪಡಿಸಿದೆ.

ಗ್ರಾಮೀಣ ಪ್ರದೇಶದಲ್ಲಿ ಕಾರ್ಯನಿರ್ವಹಿಸುವ ಆರೋಗ್ಯ ಕಾರ್ಯಕರ್ತರು ಪುಸ್ತಕದ ಮಾದರಿಯಲ್ಲೇ ಸುಲಭದಲ್ಲಿ ಕಾರ್ಯನಿರ್ವಹಿಸಬಹುದಾದಂತಹ ಈ ಟ್ಯಾಬ್ ನಿಯಂತ್ರಿತ ಆಪ್, ಸಾರ್ವಜನಿಕ ಆರೋಗ್ಯ ದತ್ತಾಂಶವನ್ನು ಡಿಜಿಟಲೀಕರಿಸಿಕೊಳ್ಳುವ ಮೂಲಕ ಪ್ರತಿ ವ್ಯಕ್ತಿಯ ಆರೋಗ್ಯ ಇತಿಹಾಸವನ್ನು ತನ್ನಲ್ಲಿರಿಸಿಕೊಳ್ಳಲಿದೆ. ಯಾವುದೇ ಯೋಜನೆ ಆಗಲಿ ಅಥವಾ ಯಾವುದೇ ವ್ಯಕ್ತಿಯ ಆರೋಗ್ಯ ಇತಿಹಾಸವಾಗಲಿ ಇದರಿಂದ ಕ್ಷಣ ಮಾತ್ರದಲ್ಲಿ ವೈದ್ಯರ ಅಥವಾ ಸರ್ಕಾರಗಳ ಕೈ ಸೇರಲಿದೆ.

ಪ್ರತಿ ವ್ಯಕ್ತಿಯ ಆರೋಗ್ಯ ಸಂಬಂಧಿ ದತ್ತಾಂಶವನ್ನು ಅಳವಡಿಸಲು 'ಇ- ಆರೋಗ್ಯ' ಎಂಬ ಹೆಸರಿನ ಈ ಆಪ್ ಹೊಂದಿದ್ದು, ಅಗತ್ಯ ಆರೋಗ್ಯ ಸಂಬಂಧಿ ಮಾಹಿತಿಯನ್ನು ಭದ್ರಪಡಿಸಿಕೊಳ್ಳಲಿದೆ.

**ಪ್ರಯೋಗಾತ್ಮಕ ಯೋಜನೆ ಯಶಸ್ವಿ:** 'ಇ-ಆರೋಗ್ಯ' ಎಂಬ ಆಪ್ ಅನ್ನು ಸಿದ್ಧಪಡಿಸಿರುವ ತೇಜಸ್ಕೋ, ಇದರ ಪ್ರಯೋಗವನ್ನು ಯಶಸ್ವಿಯಾಗಿ ಪೂರೈಸುವ ಮೂಲಕ ಸಾರ್ವಜನಿಕರಿಗೆ ಪರಿಚಯಿಸುವ ಕೆಲಸಕ್ಕೆ ಮುಂದಾಗಿದೆ. ಹಾಸನ ತಾಲ್ಲೂಕಿನಲ್ಲಿ ಈ ಟ್ಯಾಬ್ ಮೂಲದ 'ಇ-ಆರೋಗ್ಯ' ಸೇವೆಯನ್ನು ರಾಜ್ಯ ಸರ್ಕಾರದ ಆರೋಗ್ಯ ಇಲಾಖೆ ಆರೋಗ್ಯ ಕಾರ್ಯಕರ್ತರ (ಆಶಾ ಕಾರ್ಯಕರ್ತೆಯರ) ಮೂಲಕ ಪ್ರಾಯೋಗಿಕವಾಗಿ ಜಾರಿಗೆ ತರಲಾಗಿದ್ದು, ಆರೋಗ್ಯ ಕಾರ್ಯಕರ್ತರೂ ಸಹ "ಇ-ಆರೋಗ್ಯ"ವನ್ನು ಯಶಸ್ವಿಯಾಗಿ ಬಳಕೆ ಮಾಡುವ ಮೂಲಕ ಆರೋಗ್ಯ ಸೇವೆಯಲ್ಲಿ ಮಹತ್ತರ ಬದಲಾವಣೆಗೆ ಮುಂದಡಿ ಇರಿಸಿದ್ದಾರೆ.

ಆರೋಗ್ಯ ಕಾರ್ಯಕರ್ತರು ಸುಲಭದಲ್ಲಿ ಬಳಕೆ ಮಾಡುವಂತಹ ವಿಶಿಷ್ಟ ಕಾರ್ಯವೈಖರಿಯಿಂದ ಕೂಡಿರುವ 'ಇ-ಆರೋಗ್ಯ' ಆಪ್ ಪ್ರತಿ ವ್ಯಕ್ತಿಯ ಆರೋಗ್ಯ ಸಂಬಂಧಿ ದತ್ತಾಂಶವನ್ನು ಭದ್ರಪಡಿಸಿಕೊಳ್ಳುವ ಮೂಲಕ ಈ ಕ್ಷೇತ್ರದ ಸೇವೆಗಳನ್ನು ಸುಲಭೀಕರಿಸಿದೆ.

**ತೇಜಸ್ಕೋ ಸಂಸ್ಥೆಯು ಇದೇ ಮಾದರಿಯಲ್ಲಿ ಮಲ್ಟಿ ಸ್ಪೆಶಾಲಿಟಿ ಆಸ್ಪತ್ರೆಗಳಿಗಾಗಿಯೇ " ಮೆಡ್‌ಇನ್ಫೋ-ಟ್ಯಾಬ್ ಐಸಿಎಂಎಸ್" ಎಂಬ ಹೆಸರಿನ ಮತ್ತೊಂದು ಟ್ಯಾಬ್ ಮೂಲದ ಆಪ್ ಅನ್ನೂ ಸಹ ಸಿದ್ಧಪಡಿಸಿದೆ.** ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದ ಅಥವಾ ಪಡೆಯುತ್ತಿರುವ ರೋಗಿಗಳ ಆರೋಗ್ಯ ಸಂಬಂಧಿ ಮಾಹಿತಿ ವಿವರಗಳನ್ನು ತನ್ನಲ್ಲಿ ಇರಿಸಿಕೊಳ್ಳುವ "ಐಸಿಎಂಎಸ್" ನಂತರ ತುರ್ತು ಪರಿಸ್ಥಿತಿಯೂ ಸೇರಿದಂತೆ ಚಿಕಿತ್ಸೆ ವೇಳೆ ರೋಗಿಯ ಸಹಾಯಕ್ಕೆ ನಿಲ್ಲುತ್ತದೆ. ಇಂದಿನ ವೈದ್ಯಕೀಯ ಪದ್ಧತಿಯಲ್ಲಿ ರೋಗಿಯ ಆರೋಗ್ಯ ಇತಿಹಾಸ ದತ್ತಾಂಶ ಚಿಕಿತ್ಸೆಯಲ್ಲಿ ಪ್ರಮುಖ ಪಾತ್ರವಹಿಸುತ್ತದೆ. ಹೀಗೆ "ಐಸಿಎಂಎಸ್" ಬಳಿ ಇರುವ ದತ್ತಾಂಶವು ರೋಗಿಯ ತ್ವರಿತ ಚಿಕಿತ್ಸೆ ಮತ್ತು ಗುಣಮುಖನಾಗಲು ಸಹಕಾರಿಯಾಗುತ್ತದೆ.

"ಐಸಿಎಂಎಸ್" ಅಪ್ ಅನ್ನು ಈಗಾಗಲೇ ದೇಶದ ವಿವಿಧ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಗಳಲ್ಲಿ ಪ್ರಾಯೋಗಿಕವಾಗಿ ಬಳಕೆ ಮಾಡಲಾಗಿದ್ದು, ಮುಂದಿನ ದಿನಗಳಲ್ಲಿ ಆಸ್ಪತ್ರೆಗಳು 'ಸ್ಮಾರ್ಟ್ ಆಸ್ಪತ್ರೆ'ಗಳಾಗಿ ಬದಲಾಗುವುದರಲ್ಲಿ "ಐಸಿಎಂಎಸ್" ಆಪ್ ಮಹತ್ವ ಪಾತ್ರ ವಹಿಸಲಿದೆ.

'ಡಿಜಿಟಲ್ ಇಂಡಿಯಾ ಮತ್ತು ಮೇಕ್ ಇನ್ ಇಂಡಿಯಾ' ಯೋಜನೆಗಳಡಿಯಲ್ಲಿ ಸ್ವದೇಶಿ ನಿರ್ಮಿತ ಈ ಆಪ್‌ಗಳನ್ನು ಸಾರ್ವಜನಿಕ ಆರೋಗ್ಯ ರಂಗದಲ್ಲೂ ಬಳಕೆ ಮಾಡುವಂತೆ ಈಗಾಗಲೇ ಕೇಂದ್ರ ಸರ್ಕಾರಕ್ಕೆ ತೇಜಸ್ಕೋ ಮನವಿ ಮಾಡಿದೆ. ಅಂತಯೇ ಕರ್ನಾಟಕ ಸರ್ಕಾರವೂ ಸೇರಿದಂತೆ ರಾಷ್ಟ್ರದ ವಿವಿಧ ರಾಜ್ಯಗಳು 'ಇ-ಆರೋಗ್ಯ' ಆಪ್ ಬಳಕೆಗೆ ಮುಂದಡಿ ಇರಿಸಿವೆ. ಬೆಂಗಳೂರು ಮೂಲದ ತೇಜಸ್ಕೋ, ಸಿಂಗಪೂರ್‌ನಲ್ಲಿ ಸಹ ಶಾಖೆಯನ್ನು ಹೊಂದಿದ್ದು, **ಇನ್‌ಫೋಸಿಸ್ ಹಾಗೂ ಎಲ್.ಅಂಡ್ ಟಿ. ಇನ್‌ಫೋಟೆಕ್‌ನ ಮಾಜಿ ಉನ್ನತಾಧಿಕಾರಿಯಾಗಿದ್ದ ಚಂದ್ರಶೇಖರ್ ಕಾಕಲ್ ಮತ್ತು ಪದ್ಮಶ್ರೀ ಗ್ರೂಪ್‌ನ ನಿರ್ದೇಶಕರಾಗಿರುವ ರಾಜೇಶ್ ಶೆಣೈ ಅವರುಗಳು ಆರೋಗ್ಯ ಕ್ಷೇತ್ರದಲ್ಲಿ ಅತ್ಯಾಧುನಿಕ ತಂತ್ರಜ್ಞಾನ ಮೂಲಕ ಸುಧಾರಣೆ ತರಲು ಮುಂದಾಗಿರುವ ತೇಜಸ್ಕೋ ಸಂಸ್ಥೆಗೆ ಆರ್ಥಿಕವಾಗಿ ಬೆನ್ನೆಲುಬಾಗಿ ನಿಂತಿದ್ದಾರೆ ಎಂದು ತಿಳಿಸಿದರು.**

